
ಈ ಪ್ರಸಂಗದ ಬಗ್ಗೆ ಒಂದು ಚಿಕ್ಕ ಲೇಖನ ಬರೆದರು. ಇದೇ ಪರಿಸರದ ಬಗ್ಗೆ ಅವರು ಬರೆದ ಪ್ರಥಮ ಲೇಖನ. ನಂತರ ಪರಿಸರದ ಬಗ್ಗೆ ಅನೇಕ ಲೇಖನಗಳು ಅವರಿಂದ ಹೊರಬಂದವು. ನಿಸರ್ಗದಲ್ಲಿ ಪ್ರಾಣಿ, ಸಸ್ಯಗಳ ಬಗ್ಗೆ ಎಷ್ಟು ಬೇಕೊ ಅಷ್ಟನ್ನು ಅರಿತು ಅನವಶ್ಯಕವಾಗಿ ನಿಸರ್ಗದ ಜಾಲದಲ್ಲಿ ಮೂಗು ತೂರಿಸದೆ, ಅಗತ್ಯವಿದ್ದಲ್ಲಿ ತಿಳಿಯಬೇಕಾದ್ದನ್ನು ತಿಳಿದು, ಹೆಚ್ಚಿನದನ್ನು ನೋಡಿ ಅಚ್ಚರಿ ಪಟ್ಟರೆ ಸಾಕು. ನಮಗೆ ಮತ್ತು ಪ್ರಕೃತಿಗೆ ಇದರಿಂದ ನೆಮ್ಮದಿ ಎಂದು ತೇಜಸ್ವಿ ಹೇಳುತ್ತಲೇ ಇದ್ದರು.

1976ರಲ್ಲಿ 'ಕರ್ವಾಲೊ' 'ತುಷಾರ' ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತು. ಆನಂತರ ಶ್ರೀರಾಮ್ ಕಾದಂಬರಿಯ ಮೊದಲನೆ ಆವೃತ್ತಿ ಪ್ರಕಟಿಸಿದರು. ನಂತರ ನೆಲಮನೆ ದೇವೇಗೌಡರ 'ನೆಲಮನೆ ಪ್ರಕಾಶನ'ದಿಂದ, ಪಿ. ಲಂಕೇಶರ 'ಪತ್ರಿಕೆ ಪ್ರಕಾಶನ'ದಿಂದಲೂ ಪ್ರಕಟವಾಯಿತು. ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯವಾದಾಗ ದೆಹಲಿಯ ಒಂದು ಸಂಸ್ಥೆ ಪ್ರಕಟಿಸಿತು. 'ಪುಸ್ತಕ ಪ್ರಕಾಶನ' ಇಲ್ಲಿಯವರೆಗೆ 'ಕರ್ವಾಲೊ'ದ 50 ಆವೃತ್ತಿಗಳನ್ನು ಪ್ರಕಟಿಸಿದೆ.



'ಕರ್ವಾಲೊ' ಈಗಲೂ ಯಾಕೆ ಇಷ್ಟೊಂದು ಜನಪ್ರಿಯವಾಗಿದೆ? ಎಂದು ಯೋಚಿಸಿದಾಗ ಒಂದು ಅಂಶ ಹೊಳೆಯುತ್ತದೆ. ಸಾಮಾನ್ಯವಾಗಿ ಪ್ರಗತಿಶೀಲ ಲೇಖಕರ ಕತೆ, ಕಾದಂಬರಿಗಳಲ್ಲಿ ಒಂದು ಸಾಂಸಾರಿಕ ಚಿತ್ರಣ ಇದ್ದು ಓದುಗರು ಅವುಗಳಲ್ಲಿನ ನಾಯಕ, ನಾಯಕಿಯರೊಡನೆ ತಾದಾತ್ಮ್ಯ ಹೊಂದುತ್ತಿದ್ದರು. ತೇಜಸ್ವಿ ಗೊತ್ತಿದ್ದೊ ಗೊತ್ತಿಲ್ಲದೆಯೊ ಈ ಸಿದ್ಧ ಮಾದರಿಯನ್ನು ಮುರಿದರು. 'ಕರ್ವಾಲೊ'ದಲ್ಲಿ ಅನೇಕ ಕಾದಂಬರಿಗಳಲ್ಲಿ ಕಾಣುವ ಕಥಾಸ್ವರೂಪವಿಲ್ಲ, ನಾಯಕ, ನಾಯಕಿಯರಿಲ್ಲ. ಇಲ್ಲಿ ಎಲ್ಲರೂ ಮುಖ್ಯರೇ. 'ಕರ್ವಾಲೊ'ದ ಮೂಲ ಉದ್ದೇಶ ಘಟನಾವಳಿಗಳ ಮೂಲಕ ಜ್ಞಾನ, ವಿಜ್ಞಾನಗಳನ್ನು ಬಿತ್ತರಿಸುವುದು. ಈ ಕಾದಂಬರಿಯಲ್ಲಿ ಅಂತರ್ಗತವಾಗಿರುವ ನವಿರಾದ ಹಾಸ್ಯದ ಮೂಲಕ ನಾವು ನಮ್ಮ ಅರಿವಿಗೆ ಬಾರದಂತೆ ವಿಜ್ಞಾನವನ್ನು ತಿಳಿದುಕೊಳ್ಳುತ್ತೇವೆ.

'ಕರ್ವಾಲೊ' ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾದಾಗ ಕನ್ನಡ ಅಧ್ಯಾಪಕರು ಈ ಕಾದಂಬರಿ ನಮಗೆ ಅರ್ಥವಾಗುವುದಿಲ್ಲ, ನಾವು ಹೇಗೆ ಪಾಠ ಮಾಡುವುದು ಎಂದು ತೇಜಸ್ವಿಯವರನ್ನೇ ಕೇಳಿದರು. ತಮ್ಮ ವಿಷಯಕ್ಕೆ ಹೊರತಾದ ಓದು ಈ ಅಧ್ಯಾಪಕರಿಗೆ ಇರಲಿಲ್ಲವಾದ್ದರಿಂದ ಈ ಸಮಸ್ಯೆ ಎದುರಾಗಿತ್ತು. ನಾವು ವಿದ್ಯಾರ್ಥಿಗಳಾಗಿದ್ದ ಸಮಯದಲ್ಲಿ ವಿಜ್ಞಾನದ ವಿದ್ಯಾರ್ಥಿಗಳು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ವಿಷಯಗಳೊಂದಿಗೆ ಕಲಾ ವಿದ್ಯಾರ್ಥಿಗಳು ವಿಜ್ಞಾನದ ವಿಷಯಗಳನ್ನು ಒಂದು ವಿಷಯವಾಗಿ ಓದಲೇಬೇಕಿತ್ತು. ಇದರಿಂದ ನಮ್ಮ ಐಚ್ಛಿಕ ವಿಷಯಗಳಲ್ಲದೆ ಬೇರೆಯವನ್ನು ಸ್ಥೂಲವಾಗಿ ತಿಳಿಯುವುದರ ಮೂಲಕ ನಮ್ಮ ಕಲಿಕೆ ಬಹಳ ಮಟ್ಟಿಗೆ ಸರ್ವತೋಮುಖವಾಗುತ್ತಿತ್ತು. ಈ ವಿಧಾನವನ್ನು ಕುವೆಂಪು ಮೈಸೂರು ವಿಶ್ವವಿದ್ಯಾಲಯದ ಉಪ ಕುಲಪತಿಯಾಗಿದ್ದಾಗ ತಂದಿದ್ದರು. 'ಕರ್ವಾಲೊ' ಕಾದಂಬರಿ ಬರುವ ಹೊತ್ತಿಗೆ ಈ ಮಾದರಿಯ ಕಾಲೇಜು ಶಿಕ್ಷಣ ಮಾಯವಾಗಿ ಏಕಮುಖಿಯಾದ ಜ್ಞಾನಾರ್ಜನೆ ನಡೆದಿತ್ತು.